Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ನವೋದಯ ಕಾವ್ಯ : ಕುವೆಂಪು ಕಂಡ ಪ್ರಕೃತಿ.

**ಪ್ರೊ. ಕರಿಬಸಣ್ಣ.ಟಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು-572102.

**ಪ್ರಸ್ತಾವನೆ.**

ಆಧುನಿಕ ಕನ್ನಡ ಸಾಹಿತ್ಯಕ್ಕೆ ಇಂಗ್ಲೀಷ್‍ನ ರೋಮ್ಯಾಂಟಿಕ್ ಸಾಹಿತ್ಯದ ಪ್ರೇರಣೆ ದೊರೆಯಿತು. ಎಸ್.ಜಿ. ನರಸಿಂಹಾಚಾರ್ಯ ಇಂಗ್ಲೀಷ್‍ನ ಕಾವ್ಯದ ಅನುವಾದಕ್ಕೆ ಮುಂದಾಗಿ ಆಧುನಿಕ ಕನ್ನಡ ಕಾವ್ಯ ಸಮೃದ್ಧತೆಯ ಹಾದಿಯನ್ನು ತೋರಿಸಿದರು. ಪ್ರಧಾನವಾಗಿ ಅನುವಾದಕ್ಕೆ ಪ್ರಕೃತಿ ಗೀತೆಗಳನ್ನು ಆಯ್ಕೆ ಮಾಡಿಕೊಂಡರು. ಕನ್ನಡದಲ್ಲಿ ಸರಳವಾದ ಭಾಷೆ ಮತ್ತು ಛಂದಸ್ಸು ಬಳಸಿ ಅನುವಾದ ಕವನಗಳು ರೂಪುಗೊಂಡವು. ಹಟ್ಟಿಯಂಗಡಿ ನಾರಾಯಣರಾಯರು 'ಆಂಗ್ಲ ಕವಿತಾಸಾರ' ಪ್ರಕಟಿಸಿದರು. ಇಂಗ್ಲೀಷ್‍ನ ರೋಮ್ಯಾಂಟಿಕ್ ಸಾಹಿತ್ಯದಲ್ಲಿ ಬಂದ ಕಾಲಿನ್ಸ್, ಗ್ರೇ, ಟೇಲರ್, ಷೆಲ್ಲಿ, ಕೀಟ್ಸ್, ವರ್ಡ್ಸ್‍ವರ್ತ್, ಎಮರ್ಸನ್ ಮೊದಲಾದ ಕವಿಗಳು ಕನ್ನಡ ನವೋದಯ ಕವಿಗಳಿಗೆ ಸ್ಫೂರ್ತಿಯಾದರು. ಇವರಲ್ಲಿ ಮುಖ್ಯವಾಗಿ 'ವರ್ಡ್ಸ್‍ವರ್ತ್' ಇಂಗ್ಲೀಷ್‍ನ 'ಪ್ರಕೃತಿ ಕವಿ' ಎಂದು ಕರೆಸಿಕೊಂಡಿದ್ದಾರೆ. ಕನ್ನಡದಲ್ಲಿ ಕುವೆಂಪು ಅÀವರನ್ನು ಕನ್ನಡದ ವರ್ಡ್ಸ್‍ವರ್ತ್ 'ಪ್ರಕೃತಿ ಕವಿ' ಎಂದು ಕರೆಯಲಾಗಿದೆ.

ನವೋದಯ ಕಾಲಘಟ್ಟದ ಕವಿಗಳ ಮುಂದೆ ರಾಷ್ಟ್ರೀಯ ಪ್ರಜ್ಞೆ, ಸ್ವಾತಂತ್ರ್ಯಾಭಿಲಾಷೆ, ದೇಶೀಯತೆ, ಗಾಂಧಿವಾದ, ಅರವಿಂದ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ನುಡಿಗಳು, ಚೈತನ್ಯ, ಉತ್ಸಾಹಗಳ ಜೊತೆಗೆ ಪ್ರಕೃತಿ, ಪ್ರೀತಿ, ಪ್ರೇಮ ಬದುಕಿನ ಬಗೆಗಿನ ಕಾಳಜಿಗಳು ಕಾವ್ಯ ಪ್ರೇರಿತ ಅಂಶಗಳಾಗಿ ರೂಪುಗೊಂಡವು. ಆದುದರಿಂದಲೇ ನವೋದಯ ಕವಿಗಳ ಭಾಷೆಯಲ್ಲಿ ಹೊಸತನ, ಶೈಲಿಯಲ್ಲಿ ಹೊಸತನ ಮೂಡಿತು. ಕುವೆಂಪು ಪ್ರಕೃತಿಯ ಪ್ರತಿಯೊಂದು ವಸ್ತುವನ್ನು ಕಾವ್ಯದ ಚೌಕಟ್ಟಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಸೂರ್ಯೋದಯ, ಚಂದ್ರೋದಯ, ಹಸಿರು ಕೋಗಿಲೆ, ಗೊಬ್ಬರದ ಹುಳು. ಬೆಳದಿಂಗಳು, ಎಲ್ಲವೂ ಕುವೆಂಪು ಅವರ ಕಾವ್ಯಕುಸುರಿಗೆ ಒಳಪಟ್ಟಿವೆ.

ಕುಹೂ! ಕುಹೂ! ಎನ್ನುತ ಹಾಡುವ
ಕಿನ್ನರ ಕಂಠದ ಕೋಗಿಲೆಯೇ
ಮಾವಿನ ತಳಿರೊಳು ದೇವತೆಯಂದದಿ
ನೀನಡಗೇನನು ಹಾಡುತಿಹೇ?
(ಕುವೆಂಪು ಸಮಗ್ರ ಕವನ ಸಂಕಲನ. 'ನವಿಲು' . ಪುಟ ಸಂಖ್ಯೆ-92)

ಮೇಲಿನ ಕವನದಲ್ಲಿ ಕೋಗಿಲೆಯ ಕಿನ್ನರ ಕಂಠ ಕುರಿತು ಕವಿಯ ಇನಿದನಿ ಇದೆ. ಮಾವಿನ ತಳಿರೊಳಗೆ ದೇವತೆಯಂತೆ ಕುಳಿತು ಹಾಡುವ ಪಕ್ಷಿಯ ನಿನಾದಕ್ಕೆ ಮರುಳಾದ ಕವಿಯ ಮಂತ್ರ ಮಗ್ನತೆ ಇಲ್ಲಿ ವ್ಯಕ್ತವಾಗಿದೆ.

ತಳಿರೊಳು ಹೊಳೆಯುವ ಹನಿಗಳ ತೊಳಗಿ
ನಸುಗಣ್ದೆರೆಯುವ ತೆರೆಯನು ಬೆಳಗಿ

ಮೂಡಣ ಬಾನಿನ ಕರೆಯೊಳು ಮೂಡಿ
ಮರೆವುದು ನೇಸರು ಕಂಗಳ ನೋಡಿ
(ಕುವೆಂಪು ಸಮಗ್ರ ಕವನ ಸಂಕಲನ. 'ನವಿಲು' .ಪುಟ ಸಂಖ್ಯೆ-292)

ಮೇಲಿನ ಕವನದಲ್ಲಿ ತಳಿರೊಳಗೆ ಹೊಳೆಯುವ ಇಬ್ಬನಿಯ ಹನಿಯನ್ನು ನೋಡಿ ಸಂತೋಷದಿಂದ ನಸುಗಣ್ಣೆರೆಯುವ ಮೂಲಕ ಬೆಳಕನ್ನು ಚೆಲ್ಲಿ ಪೂರ್ವದ ಬಾನಿನಲ್ಲಿ ಬರುವ ಸೂರ್ಯನು ಪ್ರಕೃತಿಯ ಶುಭವನ್ನು ಕೋರುತ್ತಾ ಮೂಡಿ ಕಣ್ತೆರೆದು ಬೆಳಗುವ ಪರಿಯನ್ನು ಕವಿ ಕಣ್ಣು ಸೂಕ್ಷ್ಮವಾಗಿ ಗ್ರಹಿಸಿ ಆನಂದಿಸುತ್ತದೆ.

ನವೋದಯ ಕಾವ್ಯದ ಸಂದರ್ಭದಲ್ಲಿ ಕುವೆಂಪು ಅವರು ಅನೇಕ ಕಾರಣಗಳಿಂದ ನಮಗೆ ಮುಖ್ಯರಾಗುತ್ತಾರೆ. ಅದರಲ್ಲಿ ಅವರು ನಿಸರ್ಗಕ್ಕೆ ಕೊಟ್ಟ ಒತ್ತು ಔನತ್ಯವನ್ನು ಪಡೆಯುತ್ತದೆ. ನಿಸರ್ಗದಲ್ಲಿ ವಿಶ್ವದ ಪ್ರಮುಖ ಚೈತನ್ಯವನ್ನು ಕಂಡುಕೊಂಡವರು ಕುವೆಂಪು ಅವರು ಕೇವಲ ಪ್ರಕೃತಿಯ ಹೊರ ನೋಟಕ್ಕೆ ಮರುಳಾಗಿ ಅದನ್ನು ಭಾವುಕತೆಯಿಂದ ಆರಾಧಿಸಿದವರಲ್ಲ. ಅದರ ಸತ್ಯವು ಹೇಗೆ ಜೀವನಕ್ಕೆ ಅತ್ಯಂತ ಅವಶ್ಯಕ ಎಂಬುದನ್ನು ಕಂಡುಕೊಂಡವರು ಆ ನಿಸರ್ಗದ ಬಗೆಗೆ ಕುವೆಂಪು ಕಾವ್ಯದಲ್ಲಿ ಇತ್ಯಾತ್ಮಕ ಒಲವಿದೆ. (ಡಾ ದೊಡ್ಡರಂಗೇಗೌಡ 'ನವೋದಯ ಕಾವ್ಯ' ಪು-179) ಎಂಬ ಡಾ. ದೊಡ್ಡ ರಂಗೇಗೌಡ ಅವರ ಮಾತು ಅಕ್ಷರ ಸಹ ನಿಜ. ಕುವೆಂಪು ಅವರ ಆಧ್ಯಾತ್ಮಿಕ ನೆಲೆ ಮತ್ತು ಪ್ರಕೃತಿಯ ಒಲವು ಮೇಳೈಸಿ ಕಾವ್ಯವು ಹೊಸದೊಂದು ವಿಚಾರ ನೆಲೆಗೆ ಸಹೃದಯವನ್ನು ತಲುಪಿಸುತ್ತವೆ. ಇದಕ್ಕೆ ನಿದರ್ಶನವಾಗಿ ಅವರ 'ಆನಂದಮಯ ಈ ಜಗ ಹೃದಯ' ಕವನವನ್ನು ನೋಡಬಹುದಾಗಿದೆ.

ಆನಂದಮಯ ಈ ಜಗ ಹೃದಯ
ಏತಕೆ ಈ ಭಯ? ಮಾಣೋ
ಸೂರ್ಯೋದಯ ಚಂದ್ರೋದಯ
ದೇವರ ದಯೆ ಕಾಣೊ
ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೋ
ರವಿ ವದನವೆ ಶಿವ ಸದನವೊ
ಬರಿ ಕಣ್ಣದು ಮಣ್ಣೊ
ಶಿವನಿಲ್ಲದೆ ಸೌಂದರ್ಯವೇ
ಶವಮುಖದ ಕಣ್ಣೋ
(ಕುವೆಂಪು ಸಮಗ್ರ ಕವನ ಸಂಕಲನ. 'ಆನಂದಮಯ ಈ ಜಗಹೃದಯ' . ಪುಟ ಸಂಖ್ಯೆ-628)

ಮೇಲಿನ ಪದ್ಯದಲ್ಲಿ ಸೂರ್ಯೋದಯ ಮತ್ತು ಚಂದ್ರೋದಯವನ್ನು ದೇವರ ದಯೆ ಎಂದು ಹೇಳುತ್ತಾ ಕುವೆಂಪು ಅವರು ಪ್ರಕೃತಿಯ ಆಧ್ಯಾತ್ಮಿಕತೆಯ ಉತ್ತುಂಗ ನೆಲೆಗಳು ಎಂದು ಸಹೃದಯನಿಗೆ ತಿಳಿಸುತ್ತಾರೆ. ಈ ಜಗತ್ತಿನ ಹೃದಯ ಆನಂದಮಯ ಎಂದು ಹೇಳುವ ಕವಿ ಅದಕ್ಕೆ ಅನೇಕ ನಿದರ್ಶನಗಳನ್ನು ನೀಡುತ್ತಾರೆ. ಸೂರ್ಯನ ಉದಯ ಪ್ರಕೃತಿಯಲ್ಲಿ ನೈಸರ್ಗಿಕ ಘಟನೆ ಆದರೆ ಕವಿಯ ಕಣ್ಣಿಗೆ ಅದು ದೇವರ ದಯೆ 'ಬಿಸಿಲು' ಎಲ್ಲಾ ಜೀವಿಗಳ ಜೀವ ಚೈತನ್ಯ ಅದು ಸೂರ್ಯನಿಂದ ಸಿಕ್ಕ ಕೊಡುಗೆ. ರವಿಯು ಬರಿಯ ರವಿಯಲ್ಲ ನಮ್ಮಲ್ಲಿರುವ ಎಲ್ಲಾ ಭ್ರಾಂತಿಗಳನ್ನು ಬಿಟ್ಟು ಗಮನಿಸಿದಾಗ ಪ್ರಕೃತಿಯು ಆಧ್ಯಾತ್ಮದ ನೆಲೆಯ ಶಿವಸದನವಾಗಿ ಕಾಣಿಸುತ್ತದೆ. ಶಿವ, ಸುಂದರ, ಶುಭಮಯವಾದವನು. ಜಗತ್ತಿನ ಶಕ್ತಿ ಚೈತನ್ಯದ ದ್ಯೂತಕವಾಗಿ 'ರವಿ' ಅಂದರೆ ಸೂರ್ಯ ಈ ಜಗತ್ತಿನ ಶುಭಸೂಚಕ ಕಣ್ಣು ಎಂದು ಕವಿ ಈ ಸಾಲುಗಳ ಮೂಲಕ ಸಹೃದಯನ ಮನಸ್ಸಿನ ಕದವನ್ನು ತೆರೆಸಲು ಯಶಸ್ವಿಯಾಗಿದ್ದಾರೆ. ಕುವೆಂಪು ಅವರಿಗೆ ಪಕ್ಷಿಗಳು ಹಾರುವ ರೀತಿಯು ವಿಸ್ಮಯಕರವಾಗಿ ಕಾಣುತ್ತದೆ.

ಪ್ರಕೃತಿಯನ್ನು ಆವರಿಸಿರುವ ಶಕ್ತಿಯಾದ ದೇವರು ಪಕ್ಷಿಗಳ ಮೂಲಕ ಋಜು ಮಾಡಿದಂತೆ ಕಾಣುತ್ತದೆ. ಆದ್ದರಿಂದಲೇ "ದೇವರು ಋಜು ಮಾಡಿದನು ರಸವಶನಾಗುತ ಕವಿ ಅದ ನೋಡಿದನು" ಎಂದು ಹೇಳುತ್ತಾರೆ.

ನವೋದಯ ಕಾವ್ಯದಲ್ಲಿ 'ವಸ್ತು' ವೈವಿಧ್ಯತೆ ಇದೆ. ಸಾಮಾಜಿಕ ಬದುಕು, ನಿರಾಸೆ, ಆಂತರಿಕ ನಿವೇದನೆ, ಸುಖ, ದುಃಖ, ವಿರಹ, ಮಿಲನ ಮೊದಲಾದ ಬದುಕಿನ ಎಳೆಗಳು, ಮಾನಸಿಕ ವಿಭಿನ್ನ ಸ್ಥಿತಿಗಳು, ವಿವಿಧ ಸನ್ನಿವೇಶಗಳು, ಭಾವಗೀತೆಗಳಲ್ಲಿ ಅನಾವರಣಗೊಳ್ಳುತ್ತದೆ. ಕುವೆಂಪು ಅವರ ಭಾವಗೀತೆಗಳ ವಸ್ತು ಕೂಡ ವೈವಿಧ್ಯಮಯವಾದದ್ದು." ಮಲೆನಾಡಿನ ಗಿರಿಯ ಪಂಕ್ತಿವನರಾಜಿಗಳು, ನದಿತೊರೆಗಳು, ಮಳೆ, ಮೋಡ, ಬಾನು, ಮಂಜು, ಮೌನ, ಕಗ್ಗತ್ತಲು, ಉಷಃಕಾಲ, ಬೆಳದಿಂಗಳು, ಕಲೆ, ಕಥೆ, ಜೀವನ, ವಿಮರ್ಶೆ, ಶೃಂಗಾರ, ನಾಡಿನ ಚಿಂತೆ ಹೀಗೆ ಬಹು ಮುಖ್ಯವಾದದ್ದು ಭಾವಗೀತೆಯ ವಸ್ತು." ( ಕುವೆಂಪು 'ಕೃತ್ತಿಕೆ '- 111 ಕೊಡಲಿ ಚಿದಂಬರಂ ಅರಿಕೆ)

ಕುವೆಂಪು ಅವರ 'ನವಿಲು' 'ಕೊಳಲು' 'ಜೇನಾಗುವ' ಕವನ ಸಂಕಲನದ ಕವಿತೆಗಳಿಗೆ ಪ್ರಕೃತಿಯೇ ಮುಖ್ಯವಸ್ತುವಾಗಿ ಕವಿಯ ಭಾಷೆಯಲ್ಲಿ ಅನುಭವದ ಆರಾದನೆಯಾಗಿ ಮೂಡಿಬಂದಿದೆ. ಪ್ರಕೃತಿ ಗೀತೆಗಳಲ್ಲಿ ಕವಿ ಕುವೆಂಪು ಪ್ರಕೃತಿಗೆ ಮಾನವನ ಮನಸ್ಸಿನ ಶರಣಾಗತಿಯ ಸ್ತೋತ್ರವನ್ನೇ ಚಿತ್ರಿಸುತ್ತಾರೆ.

ಮಿತ್ರರಿರ ಮಾತಿಲ್ಲಿ ಮೈಲಿಗೆ: ಸುಮ್ಮನಿರಿ;
ಮೌನವೇ ಮಹತ್ತಿಲ್ಲಿ, ಈ ಬೈಗು ಹೊತ್ತಿನಲಿ,
ಕವಿ ಶೈಲದಲಿ
ಆನಂದವೇ ಪೂಜೆ, ಮೌನವೇ ಮಹಾ ಸ್ತೋತ್ರ!
(ಕುವೆಂಪು 'ಕೃತ್ತಿಕೆ' -ಪುಟ-13)

ಪ್ರಕೃತಿಯ ಸೌಂರ್ಯದ ಮುಂದೆ ಮಾನವನ ಮಾತೇ ಮೈಲಿಗೆ, ಮೌನವೇ ಪೂಜೆ ಎಂದು ಹೇಳುತ್ತಾ ಪ್ರಕೃತಿಯ ಮಡಿಲಲ್ಲಿ ಸಿಗುವ ಆನಂದದ ಅನುಭವ ಹಾಗೂ ಧ್ಯಾನಮಗ್ನ ಮನಃಸ್ಥಿತಿಯನ್ನು ಕುರಿತು ಇಲ್ಲಿ ಕಾಣಬಹುದಾಗಿದೆ. ಮಲೆನಾಡಿನ ರಮಣೀಯ ಪ್ರಕೃತಿಯಲ್ಲಿ ಮಿಂದು ಎದ್ದಿರುವ ಕವಿ ಪ್ರತಿಭೆ ಧ್ಯಾನಮಗ್ನನಾಗಿ ಪ್ರಕೃತಿಯನ್ನು ಆರಾಧಿಸುತ್ತದೆ. ಪ್ರಕೃತಿಯಲ್ಲಿ ಆಧ್ಯಾತ್ಮಿಕ ನೆಲೆಯನ್ನು ಕಂಡ ಕವಿ ಹೃದಯ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಗಳನ್ನು ಪ್ರತಿಪಾದಿಸಿ ಜಗತ್ತಿಗೆ ವೈಚಾರಿಕ ನೆಲೆಯನ್ನು ಅರ್ಥೈಸುತ್ತದೆ.

## ಪರಾಮರ್ಶನ ಗ್ರಂಥಗಳು

[1] ಕನ್ನಡ ನವೋದಯ ಕಾವ್ಯ - ಡಾ.ದೊಡ್ಡ ರಂಗೇಗೌಡ
[2] ಹಾಡೆ ಹಾದಿಯ ತೋರಿತು - ಎಚ್ ಎಸ್ ರಾಘವೇಂದ್ರರಾವ್
[3] ಹೊಸಗನ್ನಡ ಕವಿತೆಗಳಲ್ಲಿ ಕಾವ್ಯ ಚಿಂತನೆ - ಜಿ.ಎಸ್. ಶಿವರುದ್ರಪ್ಪ
[4] ಕುವೆಂಪು ಸಮಗ್ರ ಕವನ ಸಂಕಲನ – ಕುವೆಂಪು
[5] ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ - ಪ್ರೊ. ಎಸ್. ಅನಂತನಾರಾಯಣ